doc-119
T-P2

SATYAVADI Founded 1917 Regd. No. M 1299

ಸತ್ಯವಾದಿ

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 29 ಸಂಚಿಕೆ 177] ಸೋಮವಾರ 1—4—46 [ಬಿಡಿ ಪ್ರತಿ 3 ಪೈ

ಈ ವಾರದ ಭವಿಷ್ಯ

(ಟಿಂ ಜೋತಿಷ್ಕರಿಂದ)

ಮೇಷ—ಮಾನಸಿಕ ಸುಸ್ಥಿತಿಯುಂಟು ಆರೋಗ್ಯ ಲಾಭವುಂಟು, ಸಾಂಪತ್ತಿಕ ಲಾಭವೂ ಉಂಟು ವ್ಯವಹಾರದಲ್ಲಿ ಆನಂದ

ವೃಷಭ—ವ್ಯವಹಾರದಲ್ಲಿ ಕಷ್ಟ ನಿಷ್ಠೂರಗಳ ಭಯ, ಗೃಹದಲ್ಲಿ ಖರ್ಚು ಹೆಚ್ಚು ಮನಸ್ಸು ಆನಂದವಿರುವುದಿಲ್ಲ

ಮಿಥುನ—ಶಾರೀರಿಕ ಸ್ಥಿತಿಯು ನೆಟ್ಟಗಿರದು ವ್ಯವಹಾರದಲ್ಲಿ ಕಷ್ಟಪ್ರಾಪ್ತಿ ಆರ್ಥಿಕವಾಗಿ ಯೋಜನೆಯಿರುವದಿಲ್ಲ

ಕರ್ಕ—ಆರೋಗ್ಯ ನೆಟ್ಟಗಿರುವದಿಲ್ಲ ಖರ್ಚು ಹೆಚ್ಚು ವ್ಯವಹಾರದಲ್ಲಿ ದುಃಖ.

ಸಿಂಹ— ವ್ಯವಹಾರದಲ್ಲಿ ಯಶಸ್ಸು ಆರೋಗ್ಯಲಾಭ ಧನಲಾಭವುಂಟು

ಕನ್ಯಾ—ಆರೋಗ್ಯಲಾಭ, ಸಾಂಪತ್ತಿಕ ಲಾಭ ವಿಜಯಲಕ್ಷ್ಮಿಗಳುಂಟು

ತುಲಾ—ವ್ಯವಹಾರದಲ್ಲಿ ಮರ್ಯಾದೆ ದೂರೆಯುತ್ತದೆ ಲಾಭಪ್ರಾಪ್ತಿಯುಂಟು ಆರೋಗ್ಯ ಚೆನ್ನಾಗಿರುತ್ತದೆ.

ವೃಶ್ಚಿಕ— ಮನಸ್ಸು ನೆಟ್ಟಗಿರುವುದಿಲ್ಲ ಆರೋಗ್ಯವೂ ಅಷ್ಟಷ್ಟೇ ಧನವ್ಯಯ ಹೆಚ್ಚುವುದು

ಧನಸ್ಸು—ಮನೋಭೀತಿ, ಮಾನಸಿಕ ದೌರ್ಬಲತೆಗಳು ಹೆಚ್ಚುವುವು ಆರೋಗ್ಯವು ಚನ್ನಾಗಿರುತ್ತದೆ

ಮಕರ— ಮನಸ್ಸು ಆಹ್ಲಾದಕರವಾಗಿರುತ್ತದೆ, ಧನಲಾಭ ಯಶೋಲಾಭಗಳುಂಟು

ಕುಂಭ—ಮನಸ್ಸು ಸಮಾಧಾನವಾಗಿರುತ್ತದೆ ಆರೋಗ್ಯವೂ ನೆಟ್ಟಗಿರುತ್ತದೆ ಶುಭವಾರ್ತಾ ಬರುವುದು

ಮೀನ— ಈ ವಾರ ಶಾಂತಿಯಿಲ್ಲ ಶಾಂತಿಯಿಂದಿಬೇಕೆಂದರೂ ಸನ್ನಿವೇಶಗಳು ಅನುಕೂಲವಾಗಿರದೆ ಕಷ್ಟವನ್ನು ಕೊಡುವುವು

ನವದೆಹಲಿ ಮಾ 30— 1000 ರೂ. ಗಳಿಗೆ ಮೇಲ್ಪಟ್ಟು ಸಂಬಳ ಒರತಕ್ಕ ಅಧಿಕಾರಿಗಳಿಗೆ ಎತ್ತಟ್ಟೀಭತ್ಯ ಕೊಡುವುದಕ್ಕೆ ಕೇಂದ್ರ ಅಸೆಂಬ್ಲಿಯಲ್ಲಿ ಅನುಮೋದನೆ ದೊರೆಯಲಿಲ್ಲ.

ರಂಗೂನ್ ಮಾ 23— ಇಲ್ಲಿ ತಡೆಯಲ್ಪಟ್ಟಿದ್ದ 1000 ಮಂದಿ ಐ. ಎನ್. ಎ. ಜನರ ಪೈಕಿ 500 ಮಂದಿ ಈ ದಿನ ಭಾರತಕ್ಕೆ ಪ್ರಯಾಣ ಮಾಡಿದರು,

ಗಾಂಧೀಜೀಗೆ ವಿರುದ್ಧ ಪ್ರದರ್ಶನ

ಡೇಹ್ರಾಡೂ ರೈಲ್ವೆ ದುರಂತ

ಈಚೆಗೆ ಡೇರಾಡೂ ಎಕ್ಸ್‌ಪ್ರೆಸ್ ರೈಲೂ ಗೂಡ್ಸು ರೈಲು ಡಿಕ್ಕಿ ಹೊಡೆದು 50 ಮಂದಿಯವರೆಗೆ ಸತ್ತರಷ್ಟೆ. ಆ ರೈಲಿನಲ್ಲಿಯೇ ಪ್ರಯಾಣ ಮಾಡಿದ ಡೆಕ್ಕಾ ವಿಶ್ವವಿದ್ಯಾನಿಲಯದ ಉಪಾಧ್ಯಕ್ಷರಾದ ಕರ್ನಲ್ ಮಹಮದ್ ಹುಸೇನರವರ ಸ್ವಾನುಭವವು ಹೀಗಿದೆ —

ಆ ಹೊಡೆತವು ನನ್ನನ್ನು ನೆಲದ ಮೇಲೆ ಉರುಳಿಸಿತು. ಕೆಲವರು ರೈಲ್ವೆ ಗಾಡಿಯಲ್ಲಿ ಲೂಟಿಮಾಡಲಾರಂಭಿಸಿದರು. ಇಬ್ಬರು ನನ್ನ ಸಮೀಪಕ್ಕೆ ಬಂದರು. ಆ ಒಡೆದು ಹೋದ ರೈಲು ಗಾಡಿಯನ್ನೆಲ್ಲಾ ಗುಡಿಸಿಹಾಕಿ ಬಿಟ್ಟರು. ತಿರುಗು ಮುರುಗಾಗಿ ಬಿದ್ದಿದ್ದ ಗಾಡಿಯಲ್ಲಿ ಹತ್ತಿದರು. ನನ್ನ ತೊಗಲಿನ ಪೆಟ್ಟಿಗೆಯನ್ನು ಜೂರು ಜೂರು ಮಾಡಿದರು. ಅದರಲ್ಲಿದ್ದ ಹಣ ಎರಡು ಗಡಿಯಾರಗಳು ಇನ್ನೂ ಎಲ್ಲವನ್ನೂ ತೆಗೆದುಕೊಂಡರು. ನನ್ನನ್ನು ಆ ಒಡೆದ ಗಾಡಿಯ ಕೆಳಗಿನಿಂದ ಹೊರಗೆ ಎಳೆಯಲು ಕೇಳಿದೆನು. ಇನ್ನೂ ಹಣವನ್ನು ಕೊಟ್ಟಲ್ಲಿ ಎಳೆಯುವುದಾಗಿ ಹೇಳಿದರು ಕೊಡದಿದ್ದರೆ ಹೊಡೆಯುವುದಾಗಿ ಹೇಳಿದರು. ನಾನು ದೊಡ್ಡ ಆಫೀಸರೆಂದು ಹೇಳಿ ನನ್ನ ರಕ್ಷಣೆ ಮಾಡಿಕೊಳ್ಳಲೆತ್ನಿಸಿದೆ. ಸಹಾಯಕ್ಕಾಗಿ ಕೂಗಿದೆ. ನಾನು ಅವರ ಮಾನವತ್ವವನ್ನು ಪ್ರೇರೇಪಣೆ ಮಾಡಿದರೂ ಅವರು ಸಹಾಯವನ್ನು ಮಾಡಬೆಯೇ ಅಲ್ಲಿಂದ ಹೊರಟು ಹೋದರು.

ನೂರೆಂಬರ್ಗ್, ಮಾ 29 — ರಿಬ್ಬನ್ ಟ್ರಾಪ್ ತನ್ನ ಹೇಳಿಕೆಯಲ್ಲಿ ತಾನು ಯಹೂದಿ ವಿರೋಧಿಯಲ್ಲವೆಂದಿರುವನು.

ಬೊಂಬಾಯಿ, ಮಾ 31 — ಮಂತ್ರಿ ಮಂಡಲ ನಿಯೋಗ ಭೇಟಿಗಾಗಿ ಸ್ಪೆಷಲ್ ರೈಲಿನಲ್ಲಿ ಮಹಾತ್ಮ ಗಾಂಧೀಜೀಯವರು ಪೂನಾದಿಂದ ದೆಹಲಿಗೆ ಪ್ರಯಾಣ ಮಾಡಲು ಇಲ್ಲಿಗೆ ಬಂದಿಳಿದರು

ನಿಮ್ನ ವರ್ಗದವರಿಂದ ಗಾಂಧೀಜೀಯವರ ವಿರುದ್ಧ ಪ್ರದರ್ಶನ ನಡೆಯಿತು. ಗಾಂಧೀಜೀಯವರ ಗೃಹದ ಮುಂದೆ ವಿರುದ್ಧ ಘೋಷಣೆಗಳೂ ಕಪ್ಪಧ್ವಜ ಹಾರಾಟವೂ ನಿಮ್ನ ವರ್ಗದವರುಗಳಿಂದ ನಡೆಯಿತು. ಗೃಹದ ಮೇಲೆ ಇಟ್ಟಿಗೆ ಜೂರುಗಳು ಎಸೆಯಲ್ಪಟ್ಟವು. ಗಾಂಧೀಜೀ ಆಗಮನಕ್ಕೆ ವಂಜೆ ಗೃಹವನ್ನು ಸುಡುವ ಪ್ರಯತ್ನ ನಡೆಯಿತು. ಹರಿಜನಮತ್ತು ಕಾಂಗ್ರೆಸ್ ಸ್ವಯಂ ಸೇವಕರುಗಳು ಈ ಪ್ರಯತ್ನವನ್ನು ನಿಲ್ಲಿಸಿದರು. ಸ್ವಯಂಸೇವಕರಿಬ್ಬರಿಗೆ ಗಾಯವಾಗಿದೆ.

ಐನೂರು ಮಂದಿ ಪೋಲೀಸ್ ಕಾನ್ಸ್ಟೇಬಲ್ಲುಗಳೂ ಮತ್ತು ಎರಡು ಡಜನ್ ಪೋಲೀಸು ಅಧಿಕಾರಿಗಳೂ ಶಸ್ತ್ರಾಣಿಗಳಾಗಿ ಗಾಂಧೀಜೀ ಗೃಹವನ್ನು ಕಾಯುತ್ತಿದ್ದಾರೆ.

ಒಟಾವಿಯಾ ಮಾ 30— ಇಂಡೋನೇಷಿಯನ್ನರು ಹಾಲೆಂಡಿಗೆ ವಾಣಿಜ್ಯಮೂಕ ಮತ್ತು ಬ್ರಿಟಿಷ್ ವಿಶೇಷ ರಾಯಭಾರಿಯೊಡನೆ ವಿಮಾನದಲ್ಲಿ ಪ್ರಯಾಣ ಮಾಡಲಿರುವರು. ಒಪ್ಪಂದವಾಗುವ ಸಂಭವ ವಿದೆಯೆಂದು ಹೇಳಲಾಗಿದೆ.

ಹರ್‌ಫರ್ಡ್ ಮಾ 30— ಬ್ರಿಟಿಷ್ ಮತ್ತು ಅಮೇರಿಕಾದ ಸಿ. ಐ. ಡಿ. ಯವರು ಜರ್ಮನಿಯು ತಮ್ಮ ಭಾಗದಲ್ಲಿ ಹೊರಟಿದ್ದ ನಾಜೀ ಚಳವಳವನ್ನು ಅಡಗಿಸಿದರೆಂದು ತಿಳಿಯಬಂದಿದೆ.

ಮೃತ್ಯಾಂತ ಸಂಗ್ರಹ

ಬೊಂಬಾಯಿ ನಲ್ಲಿ ನಡೆದ ಕಳೆದ ಶನಿವಾರದ ಕುದುರೆ ಜೂಜಿನಲ್ಲಿ ಜಸ್ಸಿರ್ ಎಂಬ ಕುದುರೆಯು ಆರ್ಮಿ ಕಪ್ ಪಂದ್ಯದಲ್ಲಿ ಪ್ರಥಮ ಸ್ಥಾನ ಪಡೆದು ವಿಟೋಟನಲ್ಲಿ 1107 ರೂ. ಗಳಂತೆ ಕೊಟ್ಟಿದೆ.

ಮಾರ್ಷಲ್ ಚಿಯಾಂಗರಿಗೆ ಡಿಸ್ಟಿಂಗ್‌ವಿಷ್ಡ್ ಮೆಡಲನ್ನು ಅಮೇರಿಕಾ ಕೊಟ್ಟು ಗೌರವಿಸಿದೆ.

ಬಂಡಾರ್ ರೂರಲ್ ಕ್ಷೇತ್ರದಿಂದ ಮದರಾಸು ಶಾಸನ ಸಭೆಗೆ ನಿಂತಿದ್ದ 7 ಜನರ ಪೈಕಿ ಶ್ರೀ ಸೀತಾಲಕ್ಷ್ಮಮ್ಮ (ಕಾಂಗ್ರೆಸ್) ನವರಿಗೆ 69319 ಓಟುಗಳು ಬಂದಿವೆ. ಶ್ರೀ ಶ್ರೀರಾಮುಲು (ರೆಡಿಕಲ್ ಡೆಮೊಕ್ರಾಟ್) ರವರಿಗೆ 1224 ಓಟುಗಳು ಬಂದು ಠೇವಣಿ ಕಳೆದುಕೊಂಡರು.

ಸಿಂಧಿನ ಶಾಸನ ಸಭೆಯಲ್ಲಿ ಕೋಲಿಜ್ ವಾರ್ಟಿಯವರು ಸಭಾ ಪರಿತ್ಯಾಗ ಮಾಡಿದರು.

ಕಂಬೈಂಡ್ ಫುಡ್ ಬೋರ್ಡಿನವರು 1946 ರಲ್ಲಿ ಭಾರತಕ್ಕೆ 145 ಸಾವಿರ ಟನ್ ಅಕ್ಕಿ 1400000 ಟನ್ ಗೋಧಿ ಮತ್ತು ಮುಸುಕಿನ ಜೋಳವನ್ನು ಕೊಟ್ಟಿರುವುದಾಗಿ ಎ. ರಾಮಸ್ವಾಮಿ ಮೊದಲಿಯಾರರು ಕರಾಚಿಯಲ್ಲಿ ಹೇಳಿರುವರು.

ಪಂಜಾಬು ಮುಸ್ಲಿಂ ಲೀಗು ಸರ್ಕಾರದೊಂದಿಗೆ ಸಹಕರಿಸಲು ಒಪ್ಪಿದೆ. ಆಹಾರದ ತೀವ್ರ ಪರಿಸ್ಥಿತಿಗೆ ಎಲ್ಲಾ ಪಾರ್ಟಿಗಳ ಸಹಾಯವು ಅವಶ್ಯಕವೆಂದು ಹೇಳಲಾಗಿದೆ

ಭಾರತ ಕಾರ್ಯದರ್ಶಿ ಸರ್ ಪೆಥಿಕ್ ಲಾರೆನ್ಸರು ಜಿನ್ನಾರವರನ್ನು ಅವರ ಗೃಹದಲ್ಲಿ ಭೇಟಿ ಮಾಡಿ 1 ಘಂಟೆ ಮಾತುಕತೆ ನಡೆಸಿದರು. ಪೆಥಿಕ್ ಲಾರೆನ್ಸರ ಪತ್ನಿಯವರು ಮತ್ತು ಲಾರೆನ್ಸರು ತಮ್ಮ ಹಳೇ ಸ್ನೇಹಿತರಾದ ಸರೋಜಿನಿ ನಾಯ್ಡುರವರ ಸಂಗಡ ಊಟ ಮಾಡಿದರೆಂದು ದೆಹಲಿ ವಾರ್ತೆ ತಿಳಿಸುತ್ತದೆ.

ಹೊಸದಾಗಿ ಬರಲಿರುವ ಮದ್ರಾಸು ಗೌರ್ನರರು ಮದ್ಯಪಾನವನ್ನು ವಿಸರ್ಜಿಸಿರುವರು. ಹೊಗೆಯನ್ನು ಸೇದುವುದು ಬಲು ಕಷ್ಟವಂತೆ, ಸಿಗಾರನ್ನು ಉಪಯೋಗಿಸುವುದಿಲ್ಲವಂತೆ.

ವಧ್ಯಾಹ್ನ 12 ಘಂಟೆಗೆ ಗುಂಡು ಹಾರಿಸುವುದಕ್ಕೆ ಅವಶ್ಯಕವಾದ ನುಡ್ಡು ಇನ್ನೂ ಮಿಲಟರಿಯವರಿಂದ ದೊರೆತಿಲ್ಲವಾಗಿ ಸಧ್ಯಕ್ಕೆ ಅದನ್ನು ವ್ಯಾರಂಭಿಸುವದಿಲ್ಲವೆಂದು ಮದ್ರಾಸ್ ಸರ್ಕಾರದ ಅಲ್ಲಿನ ಪೌರಸಭೆಗೆ ತಿಳಿಸಿದೆ.

ಒಂದು ಮುಖ್ಯ ಸಮಾಚಾರ

ಇಂಗ್ಲೆಂಡು ದೇಶದಲ್ಲಿಯ್ಯ ಪ್ರಧಾನ ಮತಾಧಿಕಾರಿ (ಆರ್ಚ್‌ಬಿಷಪ್ ಆಫ್ ಕ್ಯಾಂಟರ್ಬರಿ) ಯೂ ನುತ್ತು ಒಂಭತ್ತು ಮಂದಿ ಮತಾಧಿಕಾರಿಗಳೂ ಈಚಿಗೆ ಮಾಡಿದ್ದ ಸಂಯುಕ್ತ ಪ್ರಕಟಣೆಯಲ್ಲಿ ಬ್ರಿಟಿಷ್ ಪ್ರಜೆಗಳೆಲ್ಲರೂ ಮಂತ್ರಿವರ್ಗ ರಾಯಭಾರವು ಭಾರತ ರಾಜಕೀಯ ಸಮಸ್ಯಾ ಪರಿಷ್ಕಾರವನ್ನು ಪೂರ್ತಿಗೊಳಿಸುವವರೆಗೂ ಅದಕ್ಕಾಗಿ ಬಿಡದೆ ಪ್ರಾರ್ಥನೆಯನ್ನು ಮಾಡುತ್ತಲಿರಬೇಕೆಂದು ಕೋರಿರುವರು. ಪ್ರಾರ್ಥನೆಯು ಫಲವೆಂತಹುದೆಂಬುವುದನ್ನು ಆ ಮತಗುರುಗಳು ಅರಿತು ಈ ರೀತಿಯ ಪ್ರಕಟಣೆಯನ್ನು ಹೊರಡಿಸಿದ್ದಕ್ಕಾಗಿ ಭಾರತದೇಶವು ಅವರಿಗೆ ಚಿರಋಣಿಯೆಂದಲ್ಲಿ ತಪ್ಪಾಗದು. (ಓಂ)

ಮೈಸೂರು ಹೈ ಕೋರ್ಟು ಏಪ್ರಿಲ್ 1 ರಿಂದ ಬೇಸಿಗೆ ರಜಕ್ಕಾಗಿ ಮುಚ್ಚಲ್ಪಟ್ಟು ಜೂನ್ 1 ಕ್ಕೆ ತೆರೆಯಲ್ಪಡುತ್ತದೆ.

॥ ವಂದೇಮಾತರಂ ॥

ಶ್ರೇಷ್ಠವಾದ

ರಾಜಪುರಿ ಹೊಗೇಸೊಪ್ಪಿನಿಂದ

— ತಯಾರಿಸಲ್ಪಟ್ಟ —

ಕಾಂಗ್ರೆಸ್

(ರಿಜಿಸ್ಟರ್ಡ್)

ಮಂಗಳೂರು ಬೀಡಿಗಳು

ಜೆ. ಎಸ್. ಟೊಬ್ಯಾಕೊ ವರ್ಕ್ಸ್

ಬಸ್ ಟರ್ಮಿನಸ್ ಮೈಸೂರು

ಅಲ್ಪ ವ್ಯಯದ ಕಾಯಕಲ್ಪ

ರಕ್ತವೃದ್ಧಿಗೆ — ಧಾತುಪುಷ್ಟಿಗೆ

ಸಂಜೀವನ

ಶಕ್ತಿಸುಧಾ

ಬೆಲೆ ಡಬ್ಬಿ ೧ ಕ್ಕೆ ರೂ. ೧.೮-೦

ವಿಳಾಸ— ಶಕ್ತಿಸುಧಾ, ೧೦೬೭ ಚಾಮರಾಜಪುರಂ, ಮೈಸೂರು

ಸುಖ ಆರೋಗ್ಯ ಆನಂದದಾಯಕ ಜೀವಿತಕ್ಕೆ



ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಸಾರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 1-8-0 ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವಂಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

೧೪. ಗ್ಲೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

At Opera

4 ನೇ ವಾರ

ಮೆಹತಾಬ್ — ಸುರೇಂದ್ರ

ಪಾತ್ರವಹಿಸಿರುವ

.... ವಿಶ್ವಾಸ್....

ಮುಂದಿನ ವಿನೋದ—

ಹೊನ್ನಪ್ಪ ಭಾಗವತರ್ ಟಿ ಆರ್. ರಾಜಕುಮಾರಿ ವಸಂತ ಕೋಕಿಲಂ ಬಾಲಯ್ಯ ಕಾಳಿಂಗರತ್ನಂ

ಪಾತ್ರವಹಿಸಿರುವ

— ವಾಲ್ಮೀಕಿ —

(ತಮಿಳು)

ಹಸಕ್ ಬೆಟ್ಟದಪುರದ

ಹೊಗೆಸೊಪ್ಪಿನಿಂದ ತಯಾರಾದ

— ಉಂಡೇ ನತ್ಯ —

ಇಲ್ಲಿ ದೊರೆಯುತ್ತೆ

ರಾವಂದೂರ್ ವೀರಶೆಟ್ಟಿ & ಸನ್ಸ್

ಶಿವರಾಂಪೇಟೆ ಮೈಸೂರು.

For Good Printing

L. N. Press

Sriramp et MYSORE

ಅಕ್ಕ

ಸಾಮಾಜಿಕ

ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು.

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು

At Ranjit **From 31–3–46**

RAJPUTANI

Ranjit's 101 st Picture

ಜಯರಾಜ್ — ವೀಣಾ — ಬಿರ್ಜಿಗುಪ್ತ — ಗುಲಾಂಮಹಮದ್

ರಾಜಪುತಾನಿ

Get Medical Diplomas

At home : — Ayurvedic Homeopathic, Unani, etc., Prospectus Free.

Old Indian Medical College Kotgarh, Simla

Edited, Printed and published by M. S. Krishna Rao, at the Satvavadi Press, Chamaraja Agrahar, Mysore